ವಿದ್ಯಾರ್ಥಿ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದರು. ಜಾನ್ ಸೈಮನ್ ನೇತೃತ್ವದ ಸೈಮನ್ ಆಯೋಗ ಇಂಗ್ಲೆಂಡಿನಿಂದ ಭಾರತಕ್ಕೆ ಬಂತು. 1919ರ ಮಾಂಟೆಗೋ–ಚೆಮ್ಸ್‌ಫರ್ಡ್ ಸುಧಾರಣೆಗಳ ಜಾರಿಯ ನಂತರ ಭಾರತದಲ್ಲಿ ಆಗಿರುವ ಸಂವಿಧಾನಾತ್ಮಕ ಸುಧಾರಣೆಗಳನ್ನು ಪರಿಶೀಲಿಸಲು ಹಾಗೂ ಭಾರತಕ್ಕೆ ಎಷ್ಟು ಪ್ರಮಾಣದ ಸ್ವಾತಂತ್ರ್ಯ ಕೊಡಬಹುದು ಎಂದು ಅಧ್ಯಯನ ಮಾಡಲು ಬಂದಿದ್ದ ಸೈಮನ್ ಆಯೋಗದಲ್ಲಿ ಬ್ರಿಟಿಷ್ ಸದಸ್ಯರೇ ಇದ್ದರು; ಭಾರತೀಯ ಸದಸ್ಯರು ಒಬ್ಬರೂ ಇರಲಿಲ್ಲ. ಈ ಬ್ರಿಟಿಷ್ ಕುತಂತ್ರವನ್ನು ವಿರೋಧಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 'ಸೈಮನ್, ಗೋ ಬ್ಯಾಕ್!' ('ಸೈಮನ್ ವಾಪಸ್ ಹೋಗು') ಚಳುವಳಿ ಘೋಷಿಸಿತು; ಭಾರತದ ಎಲ್ಲೆಡೆ ಚಳುವಳಿ ಶುರುವಾಯಿತು. ಕಲ್ಕತ್ತಾದಲ್ಲಿ ಲೋಹಿಯಾ ವಿದ್ಯಾರ್ಥಿ ಚಳುವಳಿಯ ನೇತೃತ್ವ ವಹಿಸಿದರು.

ಇದೇ ವರ್ಷದ ಕೊನೆಗೆ ಅಖಿಲ ಭಾರತ ಬಂಗಾಳಿ ವಿದ್ಯಾರ್ಥಿ ಸಂಘಟನೆಯ ಸಮಾವೇಶ ನಡೆಯಿತು. ಜವಾಹರಲಾಲ್ ನೆಹರು ಸಮಾವೇಶದ ಅಧ್ಯಕ್ಷರು. ಸುಭಾಷ್‌ಚಂದ್ರ ಬೋಸ್ ಸ್ವಾಗತ ಸಮಿತಿಯ ಅಧ್ಯಕ್ಷರು. ಲೋಹಿಯಾ ವಿಚಾರ ಮಂಡನಾ ಸಮಿತಿಯ ಸದಸ್ಯರು. ಆಧುನಿಕ ನೋಟದ ನೆಹರು ಬಗ್ಗೆ ಅಷ್ಟೊತ್ತಿಗಾಗಲೇ ಲೋಹಿಯಾ ಮನಸ್ಸಿನಲ್ಲಿ ಅಪಾರ ಆಕರ್ಷಣೆ ಬೆಳೆದಿತ್ತು. ನೆಹರುವನ್ನು 'ತರುಣರ ಹೃದಯ ಸಿಂಹಾಸನಾಧೀಶ್ವರ' ಎಂದು ಕೂಡ ಲೋಹಿಯಾ ಬಣ್ಣಿಸಿದ್ದರು! ನೆಹರುಗೆ ಕೂಡ ಲೋಹಿಯಾ ಬಗ್ಗೆ ಆಕರ್ಷಣೆ ಹುಟ್ಟಿತು. ಆ ಸಮಾವೇಶದಲ್ಲಿ ನೆಹರು ಮಾಡಿದ ಭಾಷಣಕ್ಕಿಂತ ಲೋಹಿಯಾ ಭಾಷಣವನ್ನೇ ಹೆಚ್ಚು ಇಷ್ಟಪಟ್ಟವರೂ ಇದ್ದರು.

ಇಸವಿ 1929. ಲೋಹಿಯಾರ ಕಲ್ಕತ್ತಾ ವಿದ್ಯಾರ್ಥಿ ದೆಸೆ ಮುಗಿಯುವ ಸಮಯ ಬಂದಿತ್ತು. ಬಿ.ಎ. ಆನರ್ಸ್ ಪದವಿ ಪಡೆದ ಲೋಹಿಯಾ ವಿದೇಶಕ್ಕೆ ಹೋಗಿ ಓದಲಿ ಎನ್ನುವುದು ಅಪ್ಪ ಹೀರಾಲಾಲರ ಆಸೆ. ಈ ಕುರಿತು ಲೋಹಿಯಾ ಗೆಳೆಯನೊಬ್ಬನಿಗೆ ಪತ್ರ ಬರೆದರು: 'ಓದಲು ವಿದೇಶಕ್ಕೆ ಹೋಗು ಎಂದು ಅಪ್ಪ ಹೇಳುತ್ತಿದ್ದಾರೆ. ಒಂದು ವೇಳೆ ಓದಲು ವಿದೇಶಕ್ಕೆ ಹೋಗದಿದ್ದರೆ, ಸೀದಾ ಹೋಗಿ ಗಾಂಧೀಜಿಯ ಜೊತೆ ಸೇರಿಕೊಳ್ಳುತ್ತೇನೆ.' ಲೋಹಿಯಾಗೆ ಸೇವಾ ಸಂಸ್ಥೆಯೊಂದರ ಸ್ಕಾಲರ್‌ಶಿಪ್ ಸಿಕ್ಕಿತು. ಖಾದಿ ತೊಡುತ್ತಿದ್ದ ಲೋಹಿಯಾ ಟೈ ಕಟ್ಟುವುದನ್ನು, ಪ್ಯಾಂಟು, ಕೋಟು ತೊಡುವುದನ್ನು ಕಲಿತರು.

ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಲೋಹಿಯಾಗೆ ಇಂಗ್ಲೆಂಡಿನಲ್ಲಿ ಓದಲು ಮನಸ್ಸಿರಲಿಲ್ಲ; ಆದರೆ ವಿದೇಶದಲ್ಲಿ ಓದುವ ಆಸೆಯ ಕೈ ಮೇಲಾಗಿ, ಇಂಗ್ಲೆಂಡಿಗೆ ಹೊರಟರು. ತಮ್ಮ ಹತ್ತೊಂಬತ್ತನೇ ವಯಸ್ಸಿನಲ್ಲಿ ಓದಲು ಇಂಗ್ಲೆಂಡಿಗೆ ಹೋದ ಮೋಹನದಾಸ ಕರಮಚಂದ ಗಾಂಧಿಯಂತೆ ಲೋಹಿಯಾ ಕೂಡ ಹತ್ತೊಂಬತ್ತನೇ ವಯಸ್ಸಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಇಂಗ್ಲೆಂಡಿಗೆ ಹೊರಟಿದ್ದರು; ಇದು ಮುಂದೆ ವಿಶಾಲ ಅರ್ಥದಲ್ಲಿ ಗುರು–ಶಿಷ್ಯರಾದ ಈ ಇಬ್ಬರ ನಡುವಣ ಕುತೂಹಲಕರ ಹೋಲಿಕೆಯಂತಿತ್ತು. ಆದರೆ ಇಂಗ್ಲೆಂಡಿಗೆ ಹೊರಟ ಗಾಂಧಿಯಂತೆ ಲೋಹಿಯಾರ ಗುರಿ ಸ್ಪಷ್ಟವಿರಲಿಲ್ಲ.

ಲೋಹಿಯಾ ಲಂಡನ್ ತಲುಪಿದ ಮೇಲೆ

